ನೇರವಾಗಿ ಬೀಳುವಂತೆ ಮಾಡಿದ್ದರು. ಕೊಕೊ, ವಾಲಿಬಾಲ್, ಥ್ರೋ ಬಾಲ್, ಕಬಡ್ಡಿ ಮುಂತಾದ ಆಟಗಳ ಮೈದಾನಗಳನ್ನು ನಿರ್ಮಿಸಿ ಪ್ರತಿನಿತ್ಯ ಕೈದಿಗಳು ತಮಗಿಷ್ಟವಾದ ಆಟಗಳಲ್ಲಿ ತೊಡಗುವಂತೆ ಮಾಡಿದ್ದರು. ಕೈದಿಗಳಿಗಾಗಿ ಪ್ರಾರ್ಥನಾ ಮಂದಿರ ಶುರುಮಾಡಿ ಇಚ್ಛೆಯುಳ್ಳವರು ಯೋಗಾಭ್ಯಾಸದಲ್ಲೂ ತೊಡಗುವಂತೆ ಮಾಡಿದ್ದರು. ಇದೆಲ್ಲಕ್ಕಿಂತ ಹೆಚ್ಚಾಗಿ ಚಿಕ್ಕದಾಗಿದ್ದ ಜೈಲಿನ ಕ್ಲಿನಿಕ್‌ಗೆ ಆಧುನಿಕ ಆಸ್ಪತ್ರೆಯ ಸ್ಪರ್ಶ ಕೊಟ್ಟಿದ್ದರು. ಮೊದಲು ಶಸ್ತ್ರಚಿಕಿತ್ಸೆಗಳಿಗಾಗಿ ಕೈದಿಗಳನ್ನು ಹೊರಗಿನ ಆಸ್ಪತ್ರೆಗಳಿಗೆ ದಾಖಲು ಮಾಡಲಾಗುತ್ತಿತ್ತು. ಈಗ ನುರಿತ ವೈದ್ಯರಿಂದ ಸೆರೆಮನೆಯ ಆಸ್ಪತ್ರೆಯಲ್ಲಿಯೇ ಶಸ್ತ್ರಚಿಕಿತ್ಸೆಗಳು ನಡೆಯುತ್ತಿದ್ದವು. ಜೈಲಿನಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ಹೊರಗಿನಿಂದ ಉಪನ್ಯಾಸಕರನ್ನು ಕರೆಸಿ ಬೋಧನೆ ಮಾಡಿಸಲಾಗುತ್ತಿತ್ತು ಮತ್ತು ಪರೀಕ್ಷೆಗಳ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು. ಸುಸಜ್ಜಿತ ಲೈಬ್ರರಿಯನ್ನು ಪ್ರಾರಂಭಿಸಿ ಕೈದಿಗಳಲ್ಲಿ ಓದಿನ ಆಸಕ್ತಿ ಹೆಚ್ಚುವಂತೆ ಮಾಡಿದ್ದರು. ಒಟ್ಟಿನಲ್ಲಿ ಕೈದಿಗಳಿಗೆ ತಾವು ಜೈಲಿನಲ್ಲಿರದೆ ತಮ್ಮ ಮನೆಗಳಲ್ಲೋ ಇಲ್ಲ ಯಾವುದಾದರು ಆಶ್ರಮದಲ್ಲೋ ಇರುವಂತೆ ಭಾಸವಾಗುತ್ತಿತ್ತು. ಮೈ ತುಂಬಾ ಶ್ರಮ, ಹೊಟ್ಟೆ ತುಂಬಾ ಊಟ, ಕಣ್ತುಂಬಾ ನಿದ್ದೆ. ಚೆರ್ಲಪಲ್ಲಿ ಸೆಂಟ್ರಲ್ ಜೈಲ್ ಮತ್ತು ಚಂಚಲಗೂಡ ಜೈಲು ಎರಡೂ ಅಲ್ಲದೆ ರಾಜ್ಯದ ಎಲ್ಲಾ ಜೈಲುಗಳೂ ಅವರ ಆಡಳಿತದ ಅಧೀನದಲ್ಲಿ ಬರುತ್ತಿದ್ದವು. ಚೆರ್ಲಪಲ್ಲಿ ಜೈಲಿನಲ್ಲಿ ಎರಡು ಸಾವಿರ ಕೈದಿಗಳಿದ್ದರೆ ಚಂಚಲಗೂಡ ಜೈಲಿನಲ್ಲಿ ಒಂದೂವರೆ ಸಾವಿರ ಕೈದಿಗಳಿದ್ದರು. ಎರಡೂ ಜೈಲುಗಳಲ್ಲೂ ಸೌಲಭ್ಯಗಳು ಒಂದೇ ಮಟ್ಟದಲ್ಲಿರುವಂತೆ ನೋಡಿಕೊಳ್ಳಲಾಗಿತ್ತು.

ರಂಗರಾವ್ ವಾರಕ್ಕೊಮ್ಮೆ ಎರಡೂ ಜೈಲುಗಳನ್ನೂ ಒಂದೊಂದು ರೌಂಡ್ ಸುತ್ತಿ ಬರುತ್ತಿದ್ದರು. ಅಲ್ಲದೆ ರಾಜಮಂಡ್ರಿ ಸೆಂಟ್ರಲ್ ಜೈಲನ್ನೂ ಆಧುನೀಕರಿಸಿ ಅಲ್ಲೂ ಕೈದಿಗಳಿಗೆ ಚೆರ್ಲಪಲ್ಲಿ, ಚಂಚಲಗೂಡ ಜೈಲುಗಳಲ್ಲಿರುವ ವಾತಾವರಣವನ್ನೇ ಕಲ್ಪಿಸಿದ್ದರು. ಹೀಗೆ ಒಮ್ಮೊಮ್ಮೆ ಒಂಟಿಯಾಗಿದ್ದಾಗ ರಂಗರಾವ್ ಹಿಂದಿನ ನೆನಪುಗಳಲ್ಲಿ ಬಿದ್ದು ಅಂತರ್ಮುಖಿಯಾಗುತ್ತಾರೆ. ಇದುವರೆಗೆ ಸವೆಸಿರುವ ತಮ್ಮ ಮುವತ್ತನಾಲ್ಕು ವರ್ಷ ಸೇವೆಯಲ್ಲಿ ಅವರು ವರ್ಗಾವಣೆಗೊಂಡಿದ್ದು ಇಪ್ಪತ್ತೆಂಟು ಸಾರಿ!. ಇಲಾಖೆಯಲ್ಲಿ 'ಟೆರರ್ ಆಫೀಸರ್' ಎಂದೇ ಹೆಸರುವಾಸಿಯಾಗಿದ್ದರು. ರಾಜಕಾರಣಿಗಳ ಪ್ರಭಾವಕ್ಕೆ ಯಾವೊತ್ತೂ ಒಳಗಾದವರಲ್ಲ. ಅವರು ವಿಶಾಖಪಟ್ಟಣಂ ರೂರಲ್ ಎಸ್ಪಿಯಾಗಿದ್ದಾಗ ಯಾವುದೋ ಕ್ರಿಮಿನಲ್ ಪ್ರಕರಣವೊಂದರಲ್ಲಿ ಆಡಳಿತಾರೂಢ ಪಕ್ಷದ ನಾಲ್ಕು ಜನ ಎಂಎಲ್‌ಎಗಳನ್ನು ಒಂದೇ ದಿನ ಅರೆಸ್ಟ್ ಮಾಡಿ, ಎಫ್‌ಐಆರ್ ದಾಖಲಿಸಿದ್ದರು. ಅದೊಂದು ದೊಡ್ಡ ಸುದ್ದಿಯಾಗಿ ಖುದ್ದು ಮುಖ್ಯಮಂತ್ರಿಗಳೇ ಎಸ್ಪಿ ಕಚೇರಿಯಲ್ಲಿ ಬಂದು ಕುಳಿತಿದ್ದರು. ಮತ್ತೊಂದು ಸಾರಿ ಹೈದರಾಬಾದ್ ಕಮಿಷನರ್ ಆಗಿದ್ದಾಗ ಚಿಟ್ ಫಂಡ್ ಕೇಸಿನಲ್ಲಿ ಸಾರ್ವಜನಿಕರಿಗೆ ನೂರು ಕೋಟಿಯಷ್ಟು ವಂಚನೆ ಮಾಡಿದ್ದ ಮುಖ್ಯಮಂತ್ರಿಗೆ ಆಪ್ತನಾಗಿದ್ದ ಉದ್ಯಮಿ ಮತ್ತು ಖ್ಯಾತ ಸುದ್ದಿ ಚಾನೆಲ್ ಒಂದರ ಯಜಮಾನನ ಮೇಲೆ ಕೇಸು ದಾಖಲಿಸಿ ಅರೆಸ್ಟ್ ಮಾಡಲು ಏರ್ಪಾಡು ಮಾಡುತ್ತಿರುವಾಗ ವಿಷಯ ತಿಳಿದ ಉದ್ಯಮಿ ಒಂದೇ ದಿನದಲ್ಲಿ ಸಾರ್ವಜನಿಕರ ನೂರು ಕೋಟಿ ರೂಪಾಯಿಗಳನ್ನು ಹಿಂತಿರುಗಿಸಿದ್ದ. ಈ ಪ್ರಕರಣ ರಂಗರಾವ್‌ಗೆ ಅಪಾರವಾದ ಜನಮನ್ನಣೆಯನ್ನು ತಂದುಕೊಟ್ಟಿತ್ತು. ಎರಡು ತಿಂಗಳ ಹಿಂದೆ ಜೈಲಿನ ಆಸ್ಪತ್ರೆಯ ಉದ್ಘಾಟನೆಗೆ ಬಂದಿದ್ದ ಯುವ ಮುಖ್ಯಮಂತ್ರಿ ಜೈಲನ್ನು ನೋಡಿ ಬೆಕ್ಕಸ ಬೆರಗಾಗಿದ್ದರು. ಆ ಮುಖ್ಯಮಂತ್ರಿ ತನಗಿಂತಲೂ ಹತ್ತನ್ನೆರಡು ವರ್ಷ ದೊಡ್ಡವರಾದ ರಂಗರಾವ್‌ಗೆ ಕಾರ್ಯಕ್ರಮದಲ್ಲಿ ಎಲ್ಲರ ಮುಂದೆಯೂ ಕಾಲು ಮುಟ್ಟಿ ನಮಸ್ಕರಿಸಿದ್ದರು. ಅದೊಂದು ರಾಷ್ಟ್ರೀಯ ಸುದ್ದಿಯಾಗಿತ್ತು. ತನ್ನ ನಿಸ್ಪೃಹ ಸೇವೆಗೆ ಸಂದ ಗೌರವಗಳಲ್ಲಿ ಅದೂ ಒಂದು ಎಂದೇ ಭಾವಿಸಿದ್ದರು ರಂಗರಾವ್.

'ಸರ್ ತಾವು ಅಡ್ಮಿನಿಸ್ಟ್ರೇಷನ್ ಕಡೆ ಬರುವುದಾದರೆ ಇಂದೇ ಆರ್ಡರ್ ಮಾಡುತ್ತೇನೆ' ಎಂದು ಮುಖ್ಯಮಂತ್ರಿಗಳು ರಂಗರಾವ್ ಅವರನ್ನು ಕೇಳಿದಾಗ, ರಂಗರಾವ್ ನಗುತ್ತಾ, 'ಬೇಡ ಸರ್, ನಾನು ಇಲ್ಲಿ ಅತ್ಯಂತ ಖುಷಿ ಮತ್ತು ನೆಮ್ಮದಿಯಿಂದಲೇ ಇದ್ದೇನೆ. ಇರುವ ಇನ್ನೊಂದು ವರ್ಷ ಸೇವೆಯನ್ನು ಇಲ್ಲೇ ಮುಗಿಸುತ್ತೇನೆ' ಎಂದು ವಿನಯದಿಂದಲೇ ಹೇಳಿದ್ದರು.

ರಂಗರಾವ್ ಅವರ ಐಪಿಎಸ್ ಸೇವೆಯ ಪ್ರಾರಂಭದ ಐದು ವರ್ಷಗಳ ಕಾಲ ಸರ್ಕಾರ ಅವರನ್ನು ನಕ್ಸಲ್ ನಿಗ್ರಹ ದಳದ ಎಸಿಪಿ ಮತ್ತು ಎಸ್ಪಿಯಾಗಿ ಅಪಾಯಿಂಟ್